# ಕರ್ನಾಟಕ ವಿಧಾನಸಭೆ

ಬುಧವಾರ 10ನೇ ಮಾರ್ಚ್ 1999 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಸ್. ರಮೇಶ್ ಕುಮಾರ್‌ರವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ :— ಬಳ್ಳಾರಿ ಜಿಲ್ಲೆಯಲ್ಲಿ ನಿರ್ಮಿಸಿರುವ ಶೌಚಾಲಯ ಕುರಿತು.

13(306) ಶ್ರೀ ಅಲ್ಲಂ ವೀರಭದ್ರಪ್ಪ (ಕುಡುಗೋಡು) :— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ 1998-99 ಸಾಲಿನಲ್ಲಿ ಇಲ್ಲಿಯವರೆಗೆ ನಿರ್ಮಿಸಿರುವ ಶೌಚಾಲಯಗಳೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಇ) 1998-99ನೇ ಸಾಲಿನಲ್ಲಿ ಈ ಜಿಲ್ಲೆಯಲ್ಲಿ ಎಷ್ಟು ಶೌಚಾಲಯಗಳನ್ನು ನಿರ್ಮಿಸಲು ಗುರಿ ಹಾಕಿಕೊಳ್ಳಲಾಗಿದೆ?

(ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ) "ನಿರ್ಮಲ ಗ್ರಾಮ ಯೋಜನೆ" ಯಡಿ ಬಳ್ಳಾರಿ ಜಿಲ್ಲೆಯಲ್ಲಿ 1998-99ನೇ ಸಾಲಿನಲ್ಲಿ ಜನವರಿ-99ರ ಅಂತ್ಯಕ್ಕೆ ನಿರ್ಮಿಸಲಾದ ಶೌಚಾಲಯಗಳ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

| ತಾಲ್ಲೂಕು | | ಶೌಚಾಲಯಗಳ ಸಂಖ್ಯೆ |
|---|---|---|
| 1. | ಬಳ್ಳಾರಿ | 740 |
| 2. | ಹಡಗಲಿ | 300 |
| 3. | ಹಗರಿಬೊಮ್ಮನಹಳ್ಳಿ | 1141 |
| 4. | ಹೊಸಪೇಟೆ | 502 |
| 5. | ಕೂಡ್ಲಿಗಿ | 1452 |
| 6. | ಸಂಡೂರು | 352 |
| 7. | ಸಿರುಗುಪ್ಪ | 321 |
| | | 4808 |

ಅ) ರೂ. 66.20 ಲಕ್ಷಗಳು

ಇ) 8817

ಶ್ರೀ ಅಲ್ಲಂ ವೀರಭದ್ರಪ್ಪ :— ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ತಾವು ನೋಡಿದಾಗ ಕೇವಲ ಒಂದೊಂದು ಕ್ಷೇತ್ರಗಳಲ್ಲಿ 200ರಿಂದ 300 ಶೌಚಾಲಯಗಳನ್ನು ಕಟ್ಟುವುದಕ್ಕೆ "ನಿರ್ಮಲ ಗ್ರಾಮ ಯೋಜನೆ" ಅಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಹಳ್ಳಿಗೆ ಹೋದರೂ ಕೂಡ ಹೆಣ್ಣುಮಕ್ಕಳು ಮೊದಲು ಶೌಚಾಲಯ ಕೇಳುತ್ತಾರೆ. ಇದನ್ನು ಪರಿಶೀಲನೆ ಮಾಡಿದಾಗ, 5 ಸಾವಿರದಿಂದ 10 ಸಾವಿರ ಜನಸಂಖ್ಯೆ ಇರತಕ್ಕಂಥ ಒಂದೊಂದು ಹಳ್ಳಿಯಲ್ಲಿ ಸರಾಸರಿ ಮೂರು ಕುಟುಂಬಗಳಿಗೆ ಒಂದೊಂದು ಶೌಚಾಲಯ ಕೊಟ್ಟಿದ್ದೇವೆ. ಆದರೆ, ಉಳಿದ ಸಮಸ್ಯೆ ಹಾಗೆ ಉಳಿಯುತ್ತದೆ. ಹೆಣ್ಣುಮಕ್ಕಳಿಗೆ ಶೌಚಾಲಯಗಳನ್ನು ಉಚಿತವಾಗಿ ಮಾಡಿಸಿಕೊಡಬೇಕು ಅಥವಾ ಹಳೆಯ ಪದ್ಧತಿಯಾದ ಕಲೆಕ್ಟೀವ್ ಟಾಯಲೆಟ್ ವ್ಯವಸ್ಥೆಯನ್ನಾದರೂ ಮಾಡಬೇಕು. ಇಲ್ಲದಿದ್ದರೆ ಈ ಸಮಸ್ಯೆ ಗ್ರಾಮಾಂತರ ಪ್ರದೇಶದಲ್ಲಿ ಹಾಗೆ ಉಳಿಯುತ್ತದೆ. ಆದ್ದರಿಂದ, ಸರಿಯಾದ ಉತ್ತರ ಅಥವಾ ಹೊಸ ಯೋಜನೆ ಏನಾದರೂ ಇದ್ದರೆ ಸರ್ಕಾರ ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾವು ಮೆಚ್ಚುತ್ತೇವೆ. ಮೊದಲು ನಮ್ಮಲ್ಲಿ ಈ ವಿಚಾರದ ಬಗ್ಗೆ ಅರಿವು ಮೂಡಿಸತಕ್ಕಂಥ

ಪ್ರಯತ್ನ ಆಗಬೇಕಾಗಿರುವುದು ಅನಿವಾರ್ಯತೆಯಾಗಿದೆ. ಈಗ ನನ್ನ ತಾಲ್ಲೂಕಿನಲ್ಲಿ ಕೇವಲ 300 ಶೌಚಾಲಯಗಳನ್ನು ನಿರ್ಮಾಣ ಮಾಡಿರುವುದು ತಲೆತಗ್ಗಿಸುವ ವಿಚಾರವಾಗಿದೆ. ಕೆಲವೊಂದಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಾಗ ಮಾತ್ರ ಕೆಲಸ ಆಗುತ್ತದೆ. ಆದರೆ ಸ್ವಲ್ಪ ಒತ್ತನ್ನು ಕೊಡುವುದು ಕಡಿಮೆ ಮಾಡಿದರೆ ಕೆಲಸ ಕಡಿಮೆ ಆಗುತ್ತದೆ. ತಾವು ಹೇಳಿದಂತೆ ಈಗ 1,650 ರೂಪಾಯಿಗಳನ್ನು ಬಡತನ ಸೀಮಾ ರೇಖೆಗಿಂತ ಕಡಿಮೆ ಇರುವವರಿಗೆ ಕೊಡುತ್ತೇವೆ. ಈಗ ಅದನ್ನು 2 ಸಾವಿರ ರೂಪಾಯಿಗಳಿಗೆ ಏರಿಸಿದ್ದೇವೆ. ಆದರೆ ಬಡತನ ಸೀಮಾ ರೇಖೆಗಿಂತ ಮೇಲ್ಪಡೆ ಇರುವಂಥವರಿಗೆ, ಅವರು ಯಾವ ಜಾತಿಯವರೇ ಆಗಲಿ ಅಥವಾ ವರ್ಗದವರೇ ಆಗಿರಲಿ ಅವರಿಗೆ 1,200 ರೂಪಾಯಿಗಳನ್ನು ಮಾತ್ರ ಕೊಡುತ್ತೇವೆ. ಉಳಿದವರಿಗೆ 2,000 ರೂಪಾಯಿಗಳನ್ನು ಕೊಡುತ್ತೇವೆ. ಮಲೆನಾಡು ಪ್ರದೇಶಗಳಾದ ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಭಾಗದ ಕೆಲವು ಪ್ರದೇಶಗಳು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಇಂಥ ಕಾರ್ಯಕ್ರಮ ಯಶಸ್ವಿಯಾಗಬೇಕಾಗಿರುವಂಥದ್ದು ಇದ್ದು ಉತ್ತರ ಕರ್ನಾಟಕದ ಭಾಗದ ಜಿಲ್ಲೆಗಳಲ್ಲಿ ಸರಿಯಾಗಿ ಯಶಸ್ವಿಯಾಗುತ್ತಿಲ್ಲ. ನಾವು ಇದರ ಬಗ್ಗೆ ಸ್ಯಾಂಪಲ್ ಸರ್ವೆ ಕೂಡ ಮಾಡಿಸಿದ್ದೇವೆ. ಹಂಪೆ ವಿಶ್ವವಿದ್ಯಾನಿಲಯದ ಮುಖೇನ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರತಕ್ಕಂಥ ವಿಚಾರದ ಬಗ್ಗೆ ಒಂದು ಯೋಜನೆಯನ್ನು ಮಾಡಿಸಿದ್ದೇವೆ. ಇನ್ಸ್‌ಟ್ಯೂಟ್ ಆಫ್ ಸೋಷಿಯೋ ಏಕನಾಮಿಕ್ಸ್ ಚೇಂಜ್ ಕಡೆಯಿಂದ 175 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಂಡು ಅವರು ಕೂಡ ವರದಿ ಕೊಟ್ಟಿದ್ದಾರೆ. ವರದಿಯಲ್ಲಿ ಏನು ಹೇಳುತ್ತಾರೆಂದರೆ, ಇದನ್ನು ಪಡೆದಿರುವ ಫಲಾನುಭವಿಗಳು ಇದರ ಉಪಯೋಗವನ್ನು ಪಡೆಯದೇ ಸ್ನಾನದ ಮನೆಗೋ ಅಥವಾ ಸ್ಟೋರೇಜ್ ಮಾಡುವುದಕ್ಕೋ ಹೀಗೆ ಬೇರೆ ಪರ್ಪಸ್ ಗಳಿಗೆ ಯೂಸ್ ಮಾಡುತ್ತಿದ್ದಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ಇವರಿಗೆ ಅರಿವನ್ನು ಮೂಡಿಸುವುದು ಅತಿ ಮುಖ್ಯವಾಗಿರುವುದರಿಂದ, ತಾವು ಹೇಳಿದಂತೆ ಇಲಾಖಾ ವತಿಯಿಂದ ಅರಿವನ್ನು ಮೂಡಿಸಲು ಒಂದು ದೊಡ್ಡ ಆಂದೋಲನ ಕಾರ್ಯಕ್ರಮವನ್ನು ಪ್ರಾಯಶಃ ಇನ್ನು ಸ್ವಲ್ಪ ದಿವಸಗಳಲ್ಲಿ ಪ್ರಾರಂಭಿಸುತ್ತೇವೆ.

ಶ್ರೀ ಅಲ್ಲಂ ವೀರಭದ್ರಪ್ಪ :— ಎರಡು-ಮೂರು ವರ್ಷ ಪ್ರಯತ್ನಿಸಿದರೂ ನಮ್ಮ ಗುರಿ ತಲುಪುದಕ್ಕೆ ಆಗಿಲ್ಲ. ಆದ್ದರಿಂದ, ಹಳೆಯ ಪದ್ಧತಿಯಂತೆ ಕಲೆಕ್ಟೀವ್ ಟಾಯಲೆಟ್ ಮಾಡುವುದಕ್ಕೆ ಏನಾದರೂ ಅವಕಾಶ ಇದೆಯೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :— ಸಾಮೂಹಿಕ ಶೌಚಾಲಯಗಳನ್ನು ಕಟ್ಟುವುದಕ್ಕೆ ಯಾವ ನಿರ್ಬಂಧವೂ ಇಲ್ಲ. ನಾವು ಹಣವನ್ನು ಕೊಡುತ್ತೇವೆ. ಸಾಮೂಹಿಕ ಶೌಚಾಲಯಗಳನ್ನು ಕಟ್ಟಿದಾಗ ನೀರು ಇಲ್ಲದಿರುವುದರಿಂದ ಉಪಯೋಗಕ್ಕೆ ಬಾರದೆ

ಹಾಳಾಗುತ್ತದೆ ಎಂದು ಈ ಕುಟುಂಬ ಶೌಚಾಲಯದ ಪರಿಕಲ್ಪನೆಯನ್ನು ನಾವು ತಂದಿದ್ದು. ನಮ್ಮಲ್ಲಿ ಅನೇಕ ಕಡೆ ಸಾಮೂಹಿಕ ಶೌಚಾಲಯಗಳನ್ನು ಕಟ್ಟತಕ್ಕಂಥದ್ದು ಇದೆ. ಇನ್ನು ಅರಿವು ಮೂಡಿಸುವ ಬಗ್ಗೆ ಹೇಳುವುದಾದರೆ ಶೇಕಡ ಹತ್ತು ಭಾಗವನ್ನು ಜಾಹೀರಾತು, ಪ್ರಕಟಣೆ, ಹಾಗೂ ಈ ವಿಚಾರಗಳ ಬಗ್ಗೆ ಕರಪತ್ರಗಳನ್ನು ಹಂಚಬೇಕು ಎನ್ನುವುದೂ ಕೂಡ ನಿಯಮಾವಳಿಯಲ್ಲಿ ಇದೆ. ಈ ಕೆಲಸಕ್ಕೆ ನಾವು ಹೆಚ್ಚು ಒತ್ತು ಕೊಟ್ಟು ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಸಚಿವರ ಉತ್ತರವನ್ನು ನಾನು ನೋಡಿದೆ, ಇದನ್ನು ನೋಡಿದಾಗ ನಿನ್ನೆ ಮಾನ್ಯ ರೇವಣ್ಣನವರು ಮನೆಗಳನ್ನು ಹಂಚಿದ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಲೆಟ್ರಿನ್‌ಗಳನ್ನು ಹಂಚಿಕೆ ಕೂಡ ಇದೇ ರೀತಿ ಹಂಚಿದ್ದಾರೇನೋ ಎಂದು ನನಗೆ ಅನುಮಾನ ಕಾಣುತ್ತದೆ. ಏಕೆಂದರೆ ಬಳ್ಳಾರಿಯಲ್ಲಿ 740, ಹಡಗಲಿಯಲ್ಲಿ 300, ಹಗರಿಬೊಮ್ಮನಹಳ್ಳಿಯಲ್ಲಿ 1,141, ಹೊಸಪೇಟೆ 502, ಕೂಡ್ಲಿಗಿ 1,452, ಸಂಡೂರು 352, ಸಿರಗುಪ್ಪ 321, ಈ ರೀತಿ ಕೊಟ್ಟಿರುವುದನ್ನು ನೋಡಿದಾಗ ಅವರು ಆ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿರುವುದರಿಂದ ಕೊಟ್ಟಿದ್ದಾರೆಂದು ನಮಗೆ ಅನ್ನಿಸುತ್ತದೆ. ಆದ್ದರಿಂದ, ಬೇರೆ ಕ್ಷೇತ್ರದ ಕಡೆಗೂ ತಮ್ಮ ಪ್ರಭಾವ ಬೀರಿದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ. ಎಲ್ಲಾ ಡಿಸ್‌ಕ್ರಿಷನ್ ಮಂತ್ರಿಗಳಿಗೆ ಇದೆ ಎಂದು ಮನೆ, ಲೆಟ್ರಿನ್ ಜಾಸ್ತಿ ಕೊಟ್ಟರೆ ಕಷ್ಟ ಆಗುತ್ತದೆ. ನಿನ್ನೆ ತಾವು ಹೇಳಿದಂತೆ ಬೇಕಾದವರಿಗೆ ತುಪ್ಪ ಜಾಸ್ತಿ ಕೊಟ್ಟತೆ ಲೆಟ್ರಿನ್ ಜಾಸ್ತಿ ಕೊಟ್ಟರೆ ಕಷ್ಟವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಹಾಸ್ಯಮಯವಾಗಿ ಒಂದು ಸಂಗತಿಯನ್ನು ಹೇಳಿದರು. ಅವರಿಗೆ ಹೇಳಬೇಕಾದರೆ ಈ ರೀತಿ ಶೌಚಾಲಯಗಳನ್ನು ನಿರ್ಮಾಣ ಮಾಡಿರುವುದೆಲ್ಲ ಬಹುತೇಕ ಕಾಂಗ್ರೆಸ್ ಕ್ಷೇತ್ರದಲ್ಲಿಯೇ ಮಾಡಿದ್ದೇವೆ. ನಿರ್ಮಾಣ ಮಾಡದೇ ಇರತಕ್ಕಂಥ ಕ್ಷೇತ್ರಗಳೇ ನಮ್ಮವು ಇದೆ.

ಅಧ್ಯಕ್ಷರು :— ಬಹಳ ಜಾಣತನದಿಂದ ಹೇಳಿದಿರಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಹಾಗಾದರೆ ನಿತ್ಯಕರ್ಮಗಳು ಅವರಿಗೆ ಮಾತ್ರ ಮೀಸಲು ಅನ್ನುವ ರೀತಿ ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಸಚಿವರು ಕಾಂಗ್ರೆಸ್ ಕ್ಷೇತ್ರದಲ್ಲಿ ನಿರ್ಮಾಣವಾಗಿದೆ ಎಂದು ಹೇಳಿದರು, ಆದರೆ ಅಲ್ಲಿ ಶೌಚಾಲಯ ನಿರ್ಮಾಣವಾಗಿಲ್ಲ, ಹಣ ಮಾತ್ರ ಖರ್ಚಾಗಿದೆ, ಇಲ್ಲಿ ಉಪಯೋಗವಾಗಿಲ್ಲ ಎಂದು ವರದಿ ಇದೆ. ನಾನು ಟೀಕೆ ಮಾಡುವುದಕ್ಕೆ ಹೋಗುತ್ತಿಲ್ಲ. ನೋಡಿ ಕರೆಂಟ್ ಹೋಯಿತು ಅಂದರೆ ಇದು ನಿಜ ಎಂದು ಅರ್ಥ.

ಅಧ್ಯಕ್ಷರು :— ಲೈಟ್ ಹೋದರೆ ನಿಜವಲ್ಲ ಲೈಟ್ ಬಂದರೆ ಮಾತ್ರ ನಿಜ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನಿನ್ನೂ ನನ್ನ ಮಾತನ್ನು ಪೂರ್ತಿ ಮಾಡಿರಲಿಲ್ಲ. ಆಗ ತಾನೇ ಕರೆಂಟ್ ಹೋಯಿತು.

ಶ್ರೀ ಎಂ.ಪಿ. ಪ್ರಕಾಶ್ :— ನೀವು ಹೇಳಿದಾಕ್ಷಣ ಕರೆಂಟ್ ಹೋಗಿದೆ ಎಂದರೆ ಸುಳ್ಳು ಎಂದರ್ಥ. ಲೈಟ್ ಬಂದರೆ ನಿಜ ಎಂದರ್ಥ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಬಾಕಿ ವಿಷಯಗಳಿಗೆ ಕರೆಂಟ್ ಹೋದರೆ ಪರವಾಗಿಲ್ಲ, ಶೌಚಾಲಯ ವಿಷಯಕ್ಕೆ ಕರೆಂಟ್ ಹೋದರೆ ಒಳ್ಳೆಯದು.

(ನಗು)

ಶ್ರೀ ಎಂ.ಪಿ. ಪ್ರಕಾಶ್ :— ಬಳ್ಳಾರಿ ಜಿಲ್ಲೆಯ ಬಗ್ಗೆ ಈ ವಿಚಾರದಲ್ಲಿ ಕನ್ನಡ ವಿಶ್ವವಿದ್ಯಾನಿಲಯದವರಿಂದ ವರದಿಯನ್ನು ತರಿಸಿಕೊಂಡಿದ್ದೇವೆ. ಅದರಲ್ಲಿ ಶೇಕಡ 10 ಪರ್ಸೆಂಟ್ ಅನ್ಯ ಕಾರಣಗಳಿಂದ ದುರುಪಯೋಗವಾಗಿದೆ ಎಂದು ಇದೆ.

ಶ್ರೀ ಸೋಮ್ಲ ನಾಯಕ್ :— ಈ ಶೌಚಾಲಯದ ನಿರ್ಮಾಣದ ವಿಷಯದಲ್ಲಿ ಬಹಳ ತಾರತಮ್ಯವಾಗಿದೆ. ಬಡತನ ರೇಖೆಗಿಂತ ಕಡಿಮೆ ಇರುವವರಿಗೆ 1,600 ರೂಪಾಯಿ ರೂಪಾಯಿಗಳಿಂದ 2,000 ರೂಪಾಯಿಗಳು ಮತ್ತು ಬಡತನ ರೇಖೆಗಳಿಗಿಂತ ಮೇಲೆ ಇರುವವರಿಗೆ 1,200 ರೂಪಾಯಿಗಳು ಎಂದ ಇದೆ. ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಈ ತಾರತಮ್ಯವನ್ನು ತೆಗೆದರೆ ಎಲ್ಲರಿಗೂ ಅನುಕೂಲವಾಗುವುದಲ್ಲದೆ ಅಭಿವೃದ್ಧಿ ಆಗುತ್ತದೆ. ಇಲ್ಲದಿದ್ದರೆ ಹಣ ದುರುಪಯೋಗವಾಗುತ್ತದೆಂದು ನನ್ನ ಭಾವನೆ.

ಶ್ರೀ ಎಂ.ಪಿ. ಪ್ರಕಾಶ್ :— ಹಣದ ದುರುಪಯೋಗ ಹಣವನ್ನು ಜಾಸ್ತಿ ಕೊಟ್ಟಂತೆ ಆಗುತ್ತದೆ. ಆದ್ದರಿಂದ ತಾವು ಮಹಾರಾಷ್ಟ್ರದ ಪದ್ಧತಿಯನ್ನು ಅನುಸರಿಸಿದರೆ ಇನ್ನೂ ಒಳ್ಳೆಯದು. ಏಕೆಂದರೆ, ಅಲ್ಲಿ ಸರ್ಕಾರ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ, ಜೆಡ್‌ಪಿಗಳು ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತವೆ, ಇದರ ಜೊತೆಗೆ ತಾಲ್ಲೂಕು ಪಂಚಾಯಿತಿಗಳು ತಮ್ಮ ಅನುದಾನದಲ್ಲಿ ಒಂದು ಸಾವಿರ ರೂಪಾಯಿಗಳನ್ನು ಕೊಡುವುದರಿಂದ ಕೇವಲ ಮೂರು ಸಾವಿರ ರೂಪಾಯಿಗಳಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡುತ್ತಾರೆ. ಈ ರೀತಿ ಜಿಲ್ಲಾ ಪಂಚಾಯಿತಿಗಳು ಒಂದು ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ತಯಾರಿದ್ದರೆ ಸರ್ಕಾರ ಈ ಬಗ್ಗೆ ಸುತ್ತೋಲೆಯನ್ನು ಹೊರಡಿಸುವುದಕ್ಕೆ ಸಿದ್ಧವಿದೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :— ಈ ಯೋಜನೆ ಬಹಳ ಉಪಯುಕ್ತವಾದ ಯೋಜನೆ. ಮಾನ್ಯ ಸಚಿವರು ತಮ್ಮ ಇಲಾಖೆಯ ಮುಖಾಂತರ ಈ ಯೋಜನೆಯನ್ನು ಇಡೀ ರಾಜ್ಯದಲ್ಲಿ ತೆಗೆದುಕೊಂಡು ಬಂದಿದ್ದಾರೆ. ನನ್ನ ಅಭಿಪ್ರಾಯ ಏನೆಂದರೆ, ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಶಾಲೆಗಳಿಗೆ, ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿಲ್ಲ. ಜಿಲ್ಲಾ ಪಂಚಾಯಿತಿಗಳಲ್ಲಿ ಕಾಂಪೌಂಡ್ ಇದ್ದರೆ ಮಾತ್ರ ಶೌಚಾಲಯಗಳನ್ನು ಕೊಡತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಆದುದರಿಂದ, ಸ್ವಲ್ಪ ಕಾನೂನನ್ನು ಸಡಿಲಗೊಳಿಸಿ ಗ್ರಾಮೀಣ ಪ್ರದೇಶಗಳಲ್ಲಿ ಓದುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಗೂ ಉಪನ್ಯಾಸಕರ ಹಿತದೃಷ್ಟಿಯಿಂದ ಎಲ್ಲಾ ಶಾಲೆಗಳಿಗೂ ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಈಗಾಗಲೇ ಹೇಳಿದಂತೆ ಶೇಕಡ 10ರಷ್ಟು ಹಣ ಇಟ್ಟಿರುವ ಭಾಗದಲ್ಲಿ ಆದ್ಯತೆಯ ಮೇಲೆ ಶಾಲಾ-ಕಾಲೇಜುಗಳಿಗೆ ಹಾಗೂ ಸಾರ್ವಜನಿಕರಿರುವ ಬಸ್ ಸ್ಟ್ಯಾಂಡ್‌ಗಳಲ್ಲಿ ಈ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು ಎಂದು ಹೇಳಿದ್ದೇವೆ. ತಾವು ಆಸಕ್ತಿ ವಹಿಸಿ ಮಾಡುವುದಾದರೆ ನಿಮ್ಮ ಕ್ಷೇತ್ರ ಇರಬಹುದು ಅಥವಾ ಬೇರೆ ಕ್ಷೇತ್ರ ಇರಬಹುದು ತಾವು ಎಷ್ಟು ಹಣವನ್ನು ಕೇಳುತ್ತಿರೋ ನಾವು ಅಷ್ಟು ಹಣವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಸೈಯ್ಯದ್ ಜುಲ್ಫಿಕರ್ ಹಷ್ಮಿ :— ಅಧ್ಯಕ್ಷರೆ, ನನಗೆ ಉತ್ತರ ಬಂದಿರುವುದಿಲ್ಲ.

ಅಧ್ಯಕ್ಷರು :— ನನಗೂ ಕೂಡ ಉತ್ತರ ಬಂದಿರುವುದಿಲ್ಲ.

ಶ್ರೀ ಮಾಟಾಳ್ ನಾಗರಾಜ್ :— ತಮಗೂ ಉತ್ತರ ಬರಲಿಲ್ಲ, ಮಾನ್ಯ ಸದಸ್ಯರಿಗೂ ಉತ್ತರ ಬರಲಿಲ್ಲ, ಹಾಗಾದರೆ ಆ ಉತ್ತರ ಯಾರಿಗೆ ಹೋಯಿತು?

ಅಧ್ಯಕ್ಷರು :— ಉತ್ತರ ಕೊಡಲು ಸಮಯವನ್ನು ಕೇಳಿದ ಬಗ್ಗೆ ನಮಗೆ ಹೇಳಲಿಲ್ಲ.

ಶ್ರೀ ಸೈಯ್ಯದ್ ಜುಲ್ಫಿಕರ್ ಹಷ್ಮಿ :— ಅಧ್ಯಕ್ಷರೆ, ತಮಗೂ ಗೊತ್ತಿದೆ, ನಮ್ಮ ಉರ್ದು ಶಾಲೆಯ ಸಮಸ್ಯೆ ಹಾಗೂ ಇತರೆ ಸಮಸ್ಯೆಗಳ ಬಗ್ಗೆ ತಮ್ಮ ಕೊಠಡಿಯಲ್ಲಿಯೇ ಒಂದು ಸಲ ಸಭೆಯಾಗಿದೆ.

ಅಧ್ಯಕ್ಷರು :— ಸಚಿವರು ಸಾಮಾನ್ಯವಾಗಿ ಸಮಯವನ್ನು ಕೇಳುವುದಿಲ್ಲ. ತಮಗೆ ಉತ್ತರವನ್ನು ತರಿಸಿಕೊಡುವುದಕ್ಕೆ ಎಷ್ಟು ದಿವಸ ಸಮಯ ಬೇಕು?

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಉತ್ತರವನ್ನು 4-5 ದಿವಸಗಳಲ್ಲಿ ತರಿಸಿಕೊಡುತ್ತೇನೆ.

ಶ್ರೀ ಸೈಯ್ಯದ್ ಜುಲ್ಫಿಕರ್ ಹಷ್ಮಿ :— ನನ್ನದೊಂದು ಅಭಿಪ್ರಾಯ ಇದೆ ಸರ್?

ಅಧ್ಯಕ್ಷರು :— ನಿಮ್ಮ ಪ್ರಶ್ನೆಗೆ 4-5 ದಿವಸಗಳಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆಂದು ಸಚಿವರು ಹೇಳಿದ್ದಾರೆ. ಅವರು ಸಾಮಾನ್ಯವಾಗಿ ಸಮಯವನ್ನು ಕೇಳುವುದಿಲ್ಲ. ಅವರ ಮಾತಿನಲ್ಲಿ ನನಗೆ ಸಂಪೂರ್ಣ ವಿಶ್ವಾಸ ಇದೆ. ಆ ಪ್ರಶ್ನೆಗೆ ಉತ್ತರ ಬಂದಾಗ ನೀವು ಕೇಳಿ, ಈಗ ಅದರ ಬಗ್ಗೆ ಬೇಡ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— 49 ಸಚಿವರಲ್ಲಿ ವಿಶ್ವಾಸ ಇಲ್ಲ, ಅವರ ಮೇಲೆ ಮಾತ್ರ ವಿಶ್ವಾಸ ಇದೆಯೇ?

ಅಧ್ಯಕ್ಷರು :— ಹಾಗೆ ಅಲ್ಲ. ಕೆಲವರಲ್ಲಿ ವಿಶ್ವಾಸ ಇದೆ, ಆ ಕೆಲವರಲ್ಲಿ ಇವರು ಒಬ್ಬರು. ಕೆಲವರು ಸಮಯವನ್ನು ಕೇಳುತ್ತಾ ಇರುತ್ತಾರೆ, ಉತ್ತರ ಮಾತ್ರ ಕಳುಹಿಸುವುದಿಲ್ಲ. ಆದರೂ ಅವರ ಮೇಲೆ ವಿಶ್ವಾಸ ಇದೆ.

<u>ರಾಜ್ಯದಲ್ಲಿರುವ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕನೇ ತರಗತಿಯವರಿಗೆ ಕನ್ನಡ ಮಾಧ್ಯಮದಲ್ಲಿ ಕಲಿಸುವುದು.</u>

16(372) ಶ್ರೀ ಕುಂಭಿ ಸುಂದರರಾವ್ (ಸುರತ್ಕಲ್) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಇಂಗ್ಲೀಷ್ ಮಾಧ್ಯಮದ ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಲಿಸಬೇಕೆಂದು ಸರ್ಕಾರವು ಕಡ್ಡಾಯಮಾಡಿರುವುದು ನಿಜವೆ; ಹಾಗಿದ್ದಲ್ಲಿ ಅದು ಕಟ್ಟುನಿಟ್ಟಾಗಿ ಜಾರಿಗೆ ಬಂದಿದೆಯೇ; ಬಂದಿಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಆ) ತರಗತಿವರೆಗಿನ ಶಿಕ್ಷಣ ಮಾಧ್ಯಮವು ಮಕ್ಕಳ ಮಾತೃ

ಇ) ಇಂತಹ ಶಾಲೆಗಳಿಗೆ ಮಾನ್ಯತೆಯನ್ನು ಕೊಡುವಾಗ ಅನುಸರಿಸುವ ಮಾನದಂಡಗಳೇನು; ನಿಯಮಗಳನ್ನು ಉಲ್ಲಂಘಿಸುವವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಈ) ಕಾನೂನು ಜಾರಿಗೆ ಬಂದ ಮೇಲೆ ಬಂದಿರುವ ಉಲ್ಲಂಘನೆಯ ಪ್ರಕರಣಗಳು ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)